# ಬಸವೇಶ್ವರ, ಗಾಂಧೀಜಿ ಹಾಗೂ ಅಂಬೇಡ್ಕರ್‌ರವರ ಸಾಮಾಜಿಕ ಸಮಾನತೆಯ ಚಿಂತನೆಗಳು

**ಶ್ರೀಶೈಲ ಬಬಲಾದ**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ.ಚ.ಚ.ಹೆಬ್ಬಾಳ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಗೊಳಸಂಗಿ.

DOI: https://doi.org/10.5281/zenodo.17295929

## ABSTRACT:

ಭಾರತೀಯರು ಆತ್ಮ ಪರಮಾತ್ಮನೆಂಬ ವ್ಯಕ್ತಿ ಕೇಂದ್ರಿತ ಸಿದ್ಧಾಂತದಿಂದ ಸಮಾಜ ಕೇಂದ್ರಿತ ಸಿದ್ಧಾಂತಕ್ಕೆ ಸಾಮಾಜಿಕ ವ್ಯವಸ್ಥೆಯನ್ನು ವಿಸ್ತರಿಸಿದ್ದರು. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ, ಅದರ ಎಲ್ಲ ಸ್ತರಗಳನ್ನು ಎಲ್ಲ ಮಗ್ಗುಲಗಳನ್ನು ಬದಲಿಸಲು ಮಾಡಿದ ಪ್ರಯತ್ನವಾಗಿದೆ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯದಿಂದ ವಚನ ಸಾಹಿತ್ಯದ ಉದಯ. ಆದ್ದರಿಂದ ಸಾಮಾಜಿಕ ಸಮಾನತೆಯ ಚಿಂತನೆಗಳು ಹೊರಬಂದವು. ವರ್ಣಭೇದ, ವರ್ಗಭೇದ ಹಾಗೂ ಲಿಂಗಭೇದ ನಿರಾಕರಣೆಗಳಂತಹ ವಿಚಾರ ಸ್ಫೋಟಗೊಂಡವು. ಬಸವಣ್ಣನವರು "ಎಲ್ಲಿ ಕುಲಗಳಿಲ್ಲವೋ, ಎಲ್ಲಿ ಜಾತಿಗಳಿಲ್ಲವೋ, ಎಲ್ಲಿ ಲಿಂಗಭೇದವಿಲ್ಲವೋ, ಎಲ್ಲಿ ವರ್ಗಭೇದವಿಲ್ಲವೋ" ಅದಕ್ಕೆ ಶರಣಸಂಕುಲ ಎಂದು ಕರೆಯುತ್ತಾರೆ.

## KEYWORDS:

ಅಸ್ಪೃಶ್ಯತೆ, ಸಮಾನತೆ, ಸಬಲೀಕರಣ, ಮಹಿಳೆ, ಸಾಂತ್ವಾನ

**ಪೀಠಿಕೆ:**

12ನೇ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಜೀವಿಸಿದ್ದ ಈ ಜಗತ್ತು ಕಂಡ ತಂತ್ರಜ್ಞಾನಿ, ದಾರ್ಶನಿಕ, ಶರಣ ಸಂಪ್ರದಾಯದ ಹರಿಕಾರ, ಜಾತಿ ವ್ಯವಸ್ಥೆ ವಿರುದ್ಧದ ಪ್ರಬಲ ಹೋರಾಟ ರೂಪಿಸಿ ಅಂತರ್ಜಾತಿ ವಿವಾಹ ಮಾಡಿಸಿದ ಕ್ರಾಂತಿಕಾರಿ, ಜೊತೆಗೆ ಮನುಷ್ಯರ ನಡುವಿನ ಗಂಡು-ಹೆಣ್ಣು, ಮೇಲು-ಕೀಳು, ಬಡವ-ಶ್ರೀಮಂತ ಹಾಗೂ ಜಾತಿ-ಜಾತಿಗಳ ನಡುವಿನ ಗೋಡೆಗಳನ್ನು ಕೆಡವಿ ಸಮ ಸಮಾಜದ ಕನಸು ಹೊತ್ತು ಸಾಗಿದ ಅಪರೂಪದ ವ್ಯಕ್ತಿತ್ವ. ಕಾಯಕ ಮತ್ತು ದಾಸೋಹ ತತ್ವದ ಮೂಲಕ ಆರ್ಥಿಕ ಸಮಾನತೆಯನ್ನು ಸಾಧಿಸಲು ತವಕಿಸಿದವರು, ಶತಮಾನಗಳ ಕಾಲ ದೌರ್ಜನ್ಯಕ್ಕೆ ಒಳಗಾಗಿದ್ದ ಬಹುಸಂಖ್ಯಾತರ ಮೂಕ ಮನಸ್ಸಿಗೆ ಅಭಿವ್ಯಕ್ತಿಯ ಮಾಧ್ಯಮ ಒದಗಿಸಿ ಅವರ ನೋವುಗಳಿಗೆ ಭಾಷೆ ನೀಡಿ, ಅವರ ನೋವುಗಳನ್ನು ಉಪಶಮನಗೊಳಿಸಿ, ಭಾವನಾತ್ಮಕ ಸಾಂತ್ವನ ನೀಡಿದವರು.

ಶರಣಸಂಕುಲ ಬಸವಣ್ಣನವರ ನವ ಸಮಾಜವಾಗಿದೆ. ಅಸ್ಪೃಶ್ಯರು, ಮಹಿಳೆಯರು, ಬಡವರು ಮತ್ತು ಎಲ್ಲ ಕಾಯಕ ಜೀವಿಗಳು ಸರ್ವಸಮಾನತೆಯನ್ನು ಜಗತ್ತಿನ ಮೊಟ್ಟ ಮೊದಲ ಅನುಭವ ಮಂಟಪದಲ್ಲಿ ನಾವು ಕಾಣುತ್ತೇವೆ. ಬಸವಣ್ಣ ಮ್ಯಾಗ್ನಕಾರ್ಟ್ ಒಪ್ಪಂದಕ್ಕಿಂತ ಅರ್ಧ ಶತಮಾನದ ಹಿಂದೆಯೇ ಕಲ್ಯಾಣದಲ್ಲಿ ಅನುಭವ ಮಂಟಪವೆಂಬ ವಿಶ್ವಮಾನ್ಯ ಪ್ರಜಾಪ್ರಭುತ್ವದ ಕಲ್ಪನೆಯಾದ ಸಂಸತ್ ಭವನವನ್ನು ನಿರ್ಮಿಸಿ, ಜಾಗತಿಕ ಲೋಕಕ್ಕೆ ಸಮತಾವಾದ, ಸಮಾನತೆಯ ಸಂದೇಶವನ್ನು ಸಾರುವ, ಎತ್ತಿ ಹಿಡಿಯುವ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ಬ್ರಾಹ್ಮಣ ಮಧುವರಸರು ಶರಣಾಗುವ ಮೂಲಕ

ಮೇಲ್ಜಾತಿಯ ಅಹಂಕಾರದಿಂದ ಮುಕ್ತರಾದರು. ಸಮಗಾರ ಹರಳಯ್ಯನವರು ಶರಣಾಗುವ ಮೂಲಕ ಕೆಳಜಾತಿಯ ಕೀಳರಿಮೆಯಿಂದ ಮುಕ್ತರಾದರು. ಹೀಗೆ ವಿವಿಧ ಜಾತಿಗಳ ಸಂಕರವಾದಂತಹ ಶರಣ ಸಂಕುಲ ಅಥವಾ ಅನುಭವ ಮಂಟಪ ವಿಶ್ವಕ್ಕೆ ಮಾದರಿಯಾಯಿತು. ಬಸವಣ್ಣನವರು ಸಮಗಾರ ಹರಳಯ್ಯ ಎಂದು ಹೇಳುವಲ್ಲಿ ಸಮಗಾರ ಎಂಬುದು ಜಾತಿಯಲ್ಲ, ಕಾಯಕ ಎಂಬುದನ್ನು ತೋರಿಸಿಕೊಟ್ಟರು. ಗಂಡ–ಹೆಂಡಿರಲ್ಲಿ ಮೇಲು ಕೀಳಿನ ಅನುಚರ ಭಾವ ಹೋಗಿ ಸಮಾನತೆಯ ಸಹಚರ ಭಾವ ಮೂಡಿತು.

ವರ್ಣ, ವರ್ಗ, ಜಾತಿ, ಕಾಯಕ ಮತ್ತು ಲಿಂಗಭೇದಗಳಿಲ್ಲದೆ ಎಲ್ಲರನ್ನೂ ಒಂದಾಗಿಸಿ ಸಮಾನತೆ ಸಾಧಿಸಿದ್ದು ಮಾನವ ಇತಿಹಾಸದ ಬಹುಮುಖ್ಯ ಘಟ್ಟಗಳಲ್ಲಿ ಒಂದಾಗಿದೆ. ಪ್ರಮುಖವಾದ ಅಂಶವೇನೆಂದರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶ್ವಸಂಸ್ಥೆ ಅಂಗೀಕರಿಸಿದ ಮಾನವ ಹಕ್ಕುಗಳ ಎಲ್ಲ 30 ಅಂಶಗಳು ಬಸವಣ್ಣನವರ ವಚನಗಳಲ್ಲಿವೆ. ದಾಂಪತ್ಯ ಸಂಬಂಧದಿಂದ ಜನಿಸಿದ ಮಗುವಿನ ಹಕ್ಕುಗಳು ಮತ್ತು ಅನೈತಿಕ ಸಂಬಂಧದಿಂದ ಹುಟ್ಟಿದ ಮಗುವಿನ ಹಕ್ಕುಗಳಲ್ಲಿ ಯಾವುದೇ ವ್ಯತ್ಯಾಸ ಇಲ್ಲ ಎಂದು 20ನೇ ಶತಮಾನದಲ್ಲಿ ವಿಶ್ವಸಂಸ್ಥೆ ಹೇಳಿದೆ. ಕಾರಣ, ಹುಟ್ಟಿನಿಂದಲೇ ಮಾನವರು ಸ್ವತಂತ್ರರು ಮತ್ತು ಘನತೆ ಹಾಗೂ ಹಕ್ಕುಗಳಲ್ಲಿ ಸಮಾನರು ಎಂದು ಬಸವಣ್ಣನವರು ಹೇಳಿದ್ದರು.

‘‘ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ, ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ’’ ಎಂದು ಬಸವಣ್ಣನವರು ಹೇಳಿದ ಹಾಗೆ ನ್ಯಾಯ, ಚಿಂತನೆ, ಮೌಲ್ಯ, ಮಾನವ ಹಕ್ಕುಗಳು ಮತ್ತು ಸ್ವಾತಂತ್ರ್ಯ ಎಲ್ಲರಿಗೂ ಸಮಾನ ಎಂದು ಹೇಳಿದರು.

‘‘ಕುದುರೆ ಸತ್ತಿಗೆಯವರು ಕಂಡಡೆ ಹೊರಳಿ ಬಿದ್ದು ಕಾಲು ಹಿಡಿಯುವರು, ಬಡ ಭಕ್ತರು ಬಂದರೆ ಎಡೆ ಇಲ್ಲ ಅತ್ತ ಸನ್ನಿ ಎಂಬರು’’ ಎಂದು ಬಸವಣ್ಣನವರು ಸಾತ್ವಿಕ ಕೋಪ ವ್ಯಕ್ತಪಡಿಸಿದ್ದರು.

ಬಸವಣ್ಣನವರ ಭಕ್ತಿ ಪಕ್ಷವು ಪ್ರತಿಯೊಬ್ಬರಿಗೂ ಬದುಕುವ, ಸ್ವತಂತ್ರವಾಗಿರುವ ಮತ್ತು ಭದ್ರತೆಯ ಹಕ್ಕನ್ನು ಕೊಡುವುದು. ಗುಲಾಮಗಿರಿಗೆ ಅವಕಾಶವಿಲ್ಲ.

‘‘ದಾಸಿ ಪುತ್ರನಾಗಲಿ, ವೇಶ್ಯೆಪುತ್ರನಾಗಲಿ ಶಿವ ದಿಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ ಎಂದು ಬಸವಣ್ಣ ತಿಳಿಸಿದ್ದಾರೆ.’’

‘‘ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು’’ ಎಂದು ಬಸವಣ್ಣನವರು ಹೇಳುವುದರ ಮೂಲಕ ಕ್ರೌರ್ಯ ಮತ್ತು ಅಮಾನುಷ ನಡವಳಿಕೆಯನ್ನು ವಿರೋಧಿಸಿದ್ದಾರೆ.

ಸಮಗಾರ ಹರಳಯ್ಯನ ಮಗ ಶೀಲವಂತ, ಬ್ರಾಹ್ಮಣ ಮಧುವರಸನ ಮಗಳು ಲಾವಣ್ಯವತಿ ವಧು ವರ ಆಗುವರು. ಇದಕ್ಕೆ ಮನುಸ್ಮೃತಿಯಲ್ಲಿ ವಿಲೋಮ ಅಥವಾ ಪ್ರತಿಲೋಮ ವಿವಾಹ ಎನ್ನುತ್ತಾರೆ. ಮೇಲ್ಜಾತಿಯ ಕನ್ಯೆ ಕೆಳಜಾತಿಯ ಪುರುಷನನ್ನು ಮದುವೆಯಾಗುವುದು ಮನುಧರ್ಮ ಸಮ್ಮತವಲ್ಲ. ಆದ್ದರಿಂದ ಹೆಣ್ಣು–ಗಂಡಿನ ತಂದೆಯರಾದ ಮಧುವರಸ ಮತ್ತು ಹರಳಯ್ಯನವರಿಗೆ ಎಳೆಹೂಟಿ ಶಿಕ್ಷೆ ಕೊಟ್ಟು ಅಂದರೆ ಆನೆ ಕಾಲಿಗೆ ಕಟ್ಟಿ ಚಿತ್ರಹಿಂಸೆ ಕೊಟ್ಟು ಕೊಲ್ಲುತ್ತಾರೆ. ಆದರೆ, ಇವತ್ತು ಇಂತಹ ಮದುವೆಗಳು ಮಾನವ ಹಕ್ಕುಗಳ ಭಾಗವಾಗಿದ್ದು, ನಮ್ಮ ಸಂವಿಧಾನಬದ್ಧವಾಗಿವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

12ನೇ ಶತಮಾನದ ಬಸವಣ್ಣನವರು ಹೀಗೆ ಮುಂದಾಲೋಚನೆಯಳ್ಳವರಾಗಿದ್ದರು.

**ಮಹಾತ್ಮ ಗಾಂಧೀಜಿ:**

ಮಹಾತ್ಮ ಗಾಂಧೀಜಿಯವರನ್ನು ದೇಶದ ಪಿತಾಮಹ ಎಂದು ಪರಿಗಣಿಸಲಾಗುತ್ತದೆ. ಬ್ರಿಟಿಷ್ ಆಳ್ವಿಕೆಯ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯ ಚಳುವಳಿಯ ನಾಯಕರಾಗಿದ್ದರು. ಅವರು ಭಾರತೀಯ ವಕೀಲರು, ರಾಜಕೀಯ ನೀತಿಶಾಸ್ತ್ರಜ್ಞರು, ವಸಾಹತುಶಾಹಿ ವಿರೋಧಿ ರಾಷ್ಟ್ರೀಯತಾವಾದಿ, ಬರಹಗಾರ ಮತ್ತು ಸಹೃದಯ ವ್ಯಕ್ತಿಯಾಗಿದ್ದರು. ಅಲ್ಪಸಂಖ್ಯಾತರು, ಅಸ್ಪೃಶ್ಯತೆ, ಅಹಿಂಸೆ, ಆರೋಗ್ಯ, ಆಹಾರ, ಇಸ್ಲಾಂ, ಉಪವಾಸ, ಕೈಗಾರಿಕಾ ಸಂಬಂಧಗಳು, ಕ್ರಿಶ್ಚಿಯನ್ನರು, ಖಿಲಾಫತ್ ಚಳುವಳಿ, ಜನನ ನಿಯಂತ್ರಣ, ಜಲಿಯನ್ ವಾಲಾಬಾಗ್, ಜಾತೀಯತೆ, ದೇವರು, ನೀತಿ, ಬೌದ್ಧಧರ್ಮ, ಮುಷ್ಕರಗಳು, ಮೂಲ ಶಿಕ್ಷಣ, ರಾಷ್ಟ್ರಭಾಷೆ, ವೈದ್ಯ, ಶಿಕ್ಷಣ, ಸರ್ವೋದಯ, ಸತ್ಯಾಗ್ರಹ, ಸ್ವದೇಶೀ, ಸ್ತ್ರೀಯರು, ಸೋಷಿಯಲಿಸಂ ಮುಂತಾಗಿ ನಾನಾ ವಿಷಯಗಳ ಮೇಲೆ ಗಾಂಧೀಜಿಯವರು ನಾನಾ ಸಮಸ್ಯೆಗಳನ್ನು ಸತ್ಯ, ಅಹಿಂಸೆಯ ಆಧಾರದ ಮೇಲೆ ಸಾಮಾಜಿಕ ನ್ಯಾಯದೃಷ್ಟಿಯಿಂದ ವಿವೇಚಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ.

ಗಾಂಧೀಜಿಯವರು ತಮ್ಮ ರಾಜಕೀಯದ ಬಗ್ಗೆ ಹೇಳುತ್ತಾ, ವ್ಯಕ್ತಿ ಸ್ವಾತಂತ್ರ್ಯವನ್ನು ನಿರಾಕರಿಸಿ ಯಾವುದೇ ಸಮಾಜ ನಿರ್ಮಾಣವಾಗುವುದು ಸಾಧ್ಯವಿಲ್ಲ. ಇದು ವ್ಯಕ್ತಿತ್ವ ಸ್ವಭಾವಕ್ಕೆ ವಿರುದ್ಧವಾಗಿದೆ. ವ್ಯಕ್ತಿ ತನ್ನದೇ ಆದ ಮನಸ್ಸನ್ನು ಹೊಂದಿರದೆ ವ್ಯಕ್ತಿ ಜೀವಿಸಲು ಸಾಧ್ಯವಿಲ್ಲ. ಸಮಾನವಾದ ಸಾಮಾಜಿಕ ಮತ್ತು ಆರ್ಥಿಕವಾದ ಅವಕಾಶಗಳನ್ನು ಹೊಂದಿರಬೇಕು. ಕರ್ತವ್ಯದ ಜೊತೆಗೆ ಸ್ವಾತಂತ್ರ್ಯ ನಿಕಟ ಸಂಬಂಧ ಹೊಂದಿರುತ್ತದೆ ಮತ್ತು ವ್ಯಕ್ತಿಯೊಬ್ಬರು ಆ ಬಗೆಯ ಸಮಾನ ಅವಕಾಶಗಳಿಗೆ ಜವಾಬ್ದಾರರಾಗಬೇಕು ಎಂದು ಗಾಂಧೀಜಿಯವರು ಹೇಳಿದರು.

ಗಾಂಧೀಜಿಯವರ ಬರಹಗಳಲ್ಲಿ ಸಾಮಾಜಿಕ ಸಮಾನತೆ, ಅಸ್ಪೃಶ್ಯತಾ ನಿವಾರಣೆ, ಮತ್ತು ಸರ್ವೋದಯದ ಪರಿಕಲ್ಪನೆಗಳು ಪ್ರಮುಖವಾಗಿ ಮೂಡಿಬಂದಿವೆ. ಜಾತಿ, ಧರ್ಮ, ಬಣ್ಣ, ಮತ್ತು ಲಿಂಗ ಆಧಾರದ ಮೇಲೆ ಸಮಾಜದಲ್ಲಿನ ತಾರತಮ್ಯವನ್ನು ಹೋಗಲಾಡಿಸುವುದು ಅವರ ಮುಖ್ಯ ಗುರಿಯಾಗಿತ್ತು. ಸರ್ವೋದಯ ತತ್ವ 'ಎಲ್ಲರ ಉನ್ನತಿ'. ಅವರು ಸಮಾಜದ ಕೊನೆಯ ವ್ಯಕ್ತಿಯ ಏಳಿಗೆಗೆ ಒತ್ತು ನೀಡಿದರು. ಸಮಾಜದ ಅಭಿವೃದ್ಧಿಯು ಕೇವಲ ಶ್ರೀಮಂತರು ಅಥವಾ ಉನ್ನತ ವರ್ಗದವರ ಏಳಿಗೆಯಲ್ಲ, ಬದಲಾಗಿ ಅತಿ ಕೆಳ ಹಂತದಲ್ಲಿರುವ, ಅತ್ಯಂತ ನಿರ್ಲಕ್ಷಿತ ವ್ಯಕ್ತಿಯ ಏಳಿಗೆಯಾಗಿದೆ. "ನನ್ನ ಹೋರಾಟವು ಸಮಾಜದ ಅತಿದೊಡ್ಡ ಸಮಸ್ಯೆಯಾದ ಬಡತನ ಮತ್ತು ಅಸಮಾನತೆಯನ್ನು ಹೋಗಲಾಡಿಸುವುದಕ್ಕಾಗಿ" ಎಂದು ಅವರು ಹೇಳಿದ್ದರು.

ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಗಾಂಧೀಜಿಯವರು ಪ್ರತಿಪಾದಿಸಿದರು. ಗ್ರಾಮ ಸ್ವರಾಜ್ಯದಲ್ಲಿ ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿಯಾಗಿರುತ್ತದೆ ಮತ್ತು ಜನರು ತಮ್ಮ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳುತ್ತಾರೆ. ಈ ತತ್ವವು ಯಾವುದೇ ಕೇಂದ್ರ ಅಧಿಕಾರದ ಹಸ್ತಕ್ಷೇಪವಿಲ್ಲದೆ, ಎಲ್ಲರೂ ಸಮಾನ ಹಕ್ಕುಗಳನ್ನು ಮತ್ತು ಅವಕಾಶಗಳನ್ನು ಪಡೆಯುವ ಸಮಾಜವನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿತ್ತು. ಭಾರತದ ಶಕ್ತಿಯು ಹಳ್ಳಿಗಳಲ್ಲಿದೆ, ಮತ್ತು ಕೇಂದ್ರ ಸರ್ಕಾರದ ಅಧಿಕಾರವು ಕನಿಷ್ಠವಾಗಿರಬೇಕು. ಗ್ರಾಮಗಳು ತಮ್ಮದೇ ಆದ ನ್ಯಾಯಾಲಯಗಳನ್ನು, ಶಾಲೆಗಳನ್ನು ಮತ್ತು ಮೂಲಭೂತ ಸೌಕರ್ಯಗಳನ್ನು

ನಿರ್ಮಿಸಿಕೊಳ್ಳಬೇಕು.

1933ರಲ್ಲಿ 'ಹರಿಜನ್' ಎಂಬ ವಾರಪತ್ರಿಕೆಯನ್ನು ಆರಂಭಿಸಿದರು. 'ಹರಿಜನ' ಎಂದರೆ 'ದೇವರ ಮಕ್ಕಳು' ಎಂದು ಅರ್ಥ. ಸಮಾಜದಲ್ಲಿ ನಿರ್ಲಕ್ಷಿಸಲ್ಪಟ್ಟವರಿಗೆ ಗೌರವ ಮತ್ತು ಘನತೆಯನ್ನು ತರಲು ಅವರು ಪ್ರಯತ್ನಿಸಿದರು. ದಲಿತರ ಶಿಕ್ಷಣ, ದೇವಸ್ಥಾನ ಪ್ರವೇಶ ಮತ್ತು ಸಮಾನ ಹಕ್ಕುಗಳ ಬಗ್ಗೆ ಅಸ್ಪೃಶ್ಯತಾ ವಿರೋಧಿ ಆಂದೋಲನಕ್ಕೆ ಚಾಲನೆ ನೀಡಿದರು.

ಗಾಂಧೀಜಿಯವರು ಮಹಿಳೆಯರನ್ನು ಸಮಾಜದ ಅವಿಭಾಜ್ಯ ಅಂಗವೆಂದು ಪರಿಗಣಿಸಿದರು. ಮಹಿಳೆಯರಿಗೆ ಶಿಕ್ಷಣ ಮತ್ತು ಸಾಮಾಜಿಕ ಸ್ವಾತಂತ್ರ್ಯ ನೀಡುವ ಮೂಲಕ ಅವರನ್ನು ಸಬಲೀಕರಣಗೊಳಿಸಲು ಪ್ರಯತ್ನಿಸಿದರು. ಮಹಿಳೆಯರು ಪುರುಷರಿಗಿಂತ ಹೆಚ್ಚು ದೈಹಿಕ ಬಲಹೀನರಲ್ಲ, ನೈತಿಕವಾಗಿ ಪುರುಷರಿಗಿಂತ ಬಲಶಾಲಿಗಳು ಎಂದು ಹೇಳಿದರು. ಪುರುಷ ಮತ್ತು ಮಹಿಳೆಯರು ಸಮಾನ ಹಕ್ಕುಗಳನ್ನು ಹೊಂದಿದ್ದಾರೆ. ಅವರು ಯಾವುದೇ ರೀತಿಯ ಲಿಂಗ ಭೇದವನ್ನು ವಿರೋಧಿಸಿದರು. ಮಹಿಳೆಯರು ಪುರುಷರಿಗೆ ಸಮಾನರು, ಆದರೆ ಪುರುಷರ ಪ್ರತಿರೂಪರಲ್ಲ. ಅವರಿಗೆ ಅವರದೇ ಆದ ಅನನ್ಯ ವ್ಯಕ್ತಿತ್ವವಿದೆ ಮತ್ತು ಅದನ್ನು ಗೌರವಿಸಬೇಕು ಎಂದು ಹೇಳಿದರು. ಗಾಂಧೀಜಿಯವರು ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದರು. ಒಂದು ರಾಷ್ಟ್ರದ ಪ್ರಗತಿಯು ಅದರ ಮಹಿಳೆಯರ ಶಿಕ್ಷಣದ ಮೇಲೆ ಅವಲಂಬಿತವಾಗಿರುತ್ತದೆ ಎಂದು ಅವರು ನಂಬಿದ್ದರು. 'ಒಬ್ಬ ಪುರುಷನಿಗೆ ಶಿಕ್ಷಣ ನೀಡಿದರೆ ಒಬ್ಬ ವ್ಯಕ್ತಿಗೆ ಶಿಕ್ಷಣ ನೀಡಿದಂತೆ, ಆದರೆ ಒಬ್ಬ ಮಹಿಳೆಗೆ ಶಿಕ್ಷಣ ನೀಡಿದರೆ ಒಂದು ಕುಟುಂಬಕ್ಕೆ ಶಿಕ್ಷಣ ನೀಡಿದಂತೆ' ಎಂಬುದು ಅವರ ಪ್ರಸಿದ್ಧ ಹೇಳಿಕೆಯಾಗಿದೆ.

ಗಾಂಧೀಜಿಯವರು ಬಣ್ಣ, ಜಾತಿ, ಧರ್ಮ ಅಥವಾ ಲಿಂಗದ ಆಧಾರದ ಮೇಲೆ ಸಮಾಜದಲ್ಲಿನ ಭೇದಭಾವಗಳನ್ನು ಸಂಪೂರ್ಣವಾಗಿ ತೊಡೆದುಹಾಕಲು ಶ್ರಮಿಸಿದರು. "ಒಬ್ಬ ವ್ಯಕ್ತಿಯನ್ನು ಅವನ ಜಾತಿಯಿಂದ ಅಳೆಯದೆ, ಅವನ ಗುಣ ಮತ್ತು ಕಾರ್ಯಗಳಿಂದ ಅಳೆಯಬೇಕು." ಇದು ಅವರ ಸಮಾನತೆಯ ಕಲ್ಪನೆಯ ಕೇಂದ್ರಬಿಂದುವಾಗಿತ್ತು. ಗಾಂಧೀಜಿಯವರ 'ಕಾಯಕದ ಗೌರವ' ತತ್ವವು ಬಸವಣ್ಣನವರ ಕಾಯಕ ತತ್ವವನ್ನು ಹೋಲುತ್ತದೆ. ಅವರು ಯಾವುದೇ ಕೆಲಸವನ್ನು ಕೀಳು ಎಂದು ಪರಿಗಣಿಸಬಾರದು ಎಂದು ಪ್ರತಿಪಾದಿಸಿದರು. ಅವರು ಕೈಯಿಂದ ಮಾಡುವ ಕೆಲಸ, ಸ್ವಚ್ಛತೆ, ಮತ್ತು ಗ್ರಾಮ ಕೈಗಾರಿಕೆಗಳನ್ನು ಉತ್ತೇಜಿಸಿದರು. ಗಾಂಧೀಜಿಯವರ ಸಮಾಜ ಸುಧಾರಣಾ ಚಿಂತನೆಗಳ ಕೇಂದ್ರಬಿಂದು ಅಹಿಂಸೆ ಮತ್ತು ಸತ್ಯ. ಈ ಎರಡೂ ತತ್ವಗಳು ಸಮಾಜದಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಮೂಲ ಸಾಧನಗಳಾಗಿವೆ. "ಅಹಿಂಸೆ ಎಂದರೆ ಕೇವಲ ಯುದ್ಧ ಮಾಡದಿರುವುದು ಮಾತ್ರವಲ್ಲ, ಅದು ಪ್ರೀತಿಯ ಬಲ, ಮತ್ತು ಅದು ನಮ್ಮ ನಡುವಿನ ಎಲ್ಲ ಭೇದಗಳನ್ನು ನಿವಾರಿಸುವ ಶಕ್ತಿಯನ್ನು ಹೊಂದಿದೆ" ಎಂದು ಅವರು ಹೇಳಿದರು. ಸತ್ಯ ಮತ್ತು ಅಹಿಂಸೆಯ ಮೂಲಕ ಮಾತ್ರ ಶಾಂತಿಯುತ ಮತ್ತು ನ್ಯಾಯಯುತ ಸಮಾಜವನ್ನು ನಿರ್ಮಿಸಲು ಸಾಧ್ಯ ಎಂದು ಅವರು ನಂಬಿದ್ದರು.

**ಡಾ. ಬಿ.ಆರ್. ಅಂಬೇಡ್ಕರ:**

ಬಾಬಾ ಸಾಹೇಬ್ ಅಂಬೇಡ್ಕರ್ ಎಂದೇ ಪ್ರಸಿದ್ಧರಾಗಿರುವ ಡಾ. ಭೀಮರಾವ್ ರಾಮ್ ಜಿ ಅಂಬೇಡ್ಕರ್ 20ನೇ ಶತಮಾನದ ಒಬ್ಬ ಶ್ರೇಷ್ಠ ಸಮಾಜ ಸುಧಾರಕ, ನ್ಯಾಯಶಾಸ್ತ್ರಜ್ಞ ಮತ್ತು ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿ. ಸಾಮಾಜಿಕವಾಗಿ ಹಿಂದುಳಿದ ದಲಿತ ಕುಟುಂಬದಲ್ಲಿ ಜನಿಸಿದ ಅಂಬೇಡ್ಕರ್ ತಮ್ಮ ಆರಂಭಿಕ ಜೀವನದ ವರ್ಷಗಳಲ್ಲಿ ಅಪಾರ

ಜಾತಿ ತಾರತಮ್ಯ ಮತ್ತು ಪ್ರತಿಕೂಲತೆಯನ್ನು ಎದುರಿಸಿದರು. ಆದಾಗ್ಯೂ, ಪರಿಶ್ರಮ ಮತ್ತು ಬೌದ್ಧಿಕ ಪ್ರತಿಭೆಯ ಮೂಲಕ ಅವರು ಪ್ರಮುಖ ನಾಯಕರಾಗಿ ಬೆಳೆದರು. ಇವರ ವಿಚಾರಗಳು ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ, ಜಾತಿ ವ್ಯವಸ್ಥೆ, ಮಹಿಳಾ ಹಕ್ಕುಗಳು, ಶಿಕ್ಷಣ ಮತ್ತು ಅಂಚಿನಲ್ಲಿರುವ ಸಮುದಾಯಗಳ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ವ್ಯಾಪಕ ಶ್ರೇಣಿಯ ಸಮಸ್ಯೆಗಳನ್ನು ಒಳಗೊಂಡಿದೆ. ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯದ ತತ್ವದಲ್ಲಿ ದೃಢವಾಗಿ ನಂಬಿಕೆ ಹೊಂದಿದ್ದರು. ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಪ್ರತಿಪಾದಿಸಿದರು. ಇದು ಒಂದು ಶಾಶ್ವತ ಸಾಮಾಜಿಕ ದುಷ್ಟತನ ಎಂದು ಪರಿಗಣಿಸಿ, ಅಸ್ಪೃಶ್ಯರು ಅಥವಾ ದಲಿತರು ತಮ್ಮ ಘನತೆಯನ್ನು ಪ್ರತಿಪಾದಿಸುವ ಮತ್ತು ಹಕ್ಕುಗಳಿಗಾಗಿ ಹೋರಾಡುವ ಅಗತ್ಯವನ್ನು ಅಂಬೇಡ್ಕರ್ ಒತ್ತಿ ಹೇಳಿದರು. ಅವರು 1927 ರಿಂದ 1932ರ ವರೆಗೆ ಅಹಿಂಸಾತ್ಮಕ ಆಂದೋಲನಗಳ ಮುಂದಾಳತ್ವ ವಹಿಸಿ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶದ ಹಕ್ಕು, ಸಾರ್ವಜನಿಕ ಕೆರೆ, ಬಾವಿಗಳಿಂದ ನೀರು ಸೇರುವ ಹಕ್ಕು ಇತ್ಯಾದಿಗಳಿಗಾಗಿ ಹೋರಾಡಿದರು.

**ಉದಾಹರಣೆಗೆ:**

- ನಾಸಿಕದ ಕಾಳ ರಾಮ ದೇವಸ್ಥಾನ ಪ್ರವೇಶ
- ಮಹಾಡದ ಚೌಡಾರ ಕೆರೆಯ ನೀರು ಬಳಕೆ

ಸಮಾಜದಲ್ಲಿ ಅಸ್ಪೃಶ್ಯರನ್ನು ಕ್ರೂರವಾಗಿ ನೋಡುತ್ತಿದ್ದ ರೀತಿಗೆ ಮೂಲ ಕಾರಣ "ಮನುಸ್ಮೃತಿ" ಎಂದು ಚಳುವಳಿಯಲ್ಲಿ ಅದನ್ನು ದಹನ ಮಾಡಲಾಯಿತು. ಇವರಲ್ಲಿ ಸಮಾನತೆ ತರಲು ದಲಿತರಿಗೆ ಪ್ರತ್ಯೇಕವಾದ ಚುನಾವಣಾ ಕ್ಷೇತ್ರಕ್ಕಾಗಿ ಬೇಡಿಕೆ ಇಟ್ಟರೂ ಅದು ಸಫಲವಾಗಲಿಲ್ಲ. 1932 ರಲ್ಲಿ ಬ್ರಿಟಿಷರು ಜಾರಿಗೆ ತಂದ ಕೋಮುವಾರು ಕಾನೂನಿನಲ್ಲಿ ಅಸ್ಪೃಶ್ಯರಿಗೆ ಪ್ರತ್ಯೇಕ ಕ್ಷೇತ್ರವನ್ನು ಮಂಜೂರು ಮಾಡಲಾಯಿತು. ಆದರೆ ಗಾಂಧೀಜಿಯವರ ಅಮರಣಾಂತ ಉಪವಾಸದಿಂದ ಪ್ರತ್ಯೇಕ ಕ್ಷೇತ್ರದ ಬೇಡಿಕೆ ಬದಲಾಗಿ ಅಸ್ಪೃಶ್ಯರಿಗೆ ಪ್ರಾತಿನಿಧ್ಯವನ್ನು ಹೆಚ್ಚು ಮಾಡಲು ಬ್ರಿಟಿಷರು ಒಪ್ಪಿಕೊಂಡರು. ಅವರ ಪ್ರಯತ್ನಗಳು ಭಾರತೀಯ ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ನಿಷೇಧಿಸುವ, ದಲಿತರು ಹಾಗೂ ಇತರ ಅಂಚಿನಲ್ಲಿರುವ ಗುಂಪುಗಳ ಉನ್ನತಿಗಾಗಿ ಮೀಸಲಾತಿ ಎಂದು ಕರೆಯಲ್ಪಡುವ ದೃಢವಾದ ಕ್ರಮಗಳನ್ನು ಒದಗಿಸುವ ನಿಬಂಧನೆಗಳನ್ನು ಸೇರಿಸಲು ಕಾರಣವಾಯಿತು.

ತಲೆಮಾರುಗಳ ನಡುವಿನ ಬಡತನ ಮತ್ತು ತಾರತಮ್ಯದ ಚಕ್ರವನ್ನು ಮುರಿಯಲು ಶಿಕ್ಷಣವೇ ಪ್ರಮುಖ ಮಾರ್ಗ ಎಂದು ಅಂಬೇಡ್ಕರ್ ಅರ್ಥ ಮಾಡಿಕೊಂಡರು. ದಲಿತರು ಮತ್ತು ಮಹಿಳೆಯರಿಗೆ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು. ಗುಣಮಟ್ಟದ ಶಿಕ್ಷಣ ಮೂಲಭೂತ ಹಕ್ಕಾಗಿ ಪಡೆಬೇಕೆಂದು ಪ್ರತಿಪಾದಿಸಿ, ಸಂವಿಧಾನದಲ್ಲಿ ಕೂಡ ಅದನ್ನು ಸೇರುವಂತೆ ಮಾಡಿದರು. ಸ್ವತಃ ಸವಾಲುಗಳನ್ನು ಹಾಗೂ ನೋವನ್ನು ಅನುಭವಿಸಿ ಉನ್ನತ ಶಿಕ್ಷಣ ಪಡೆದವರು ಅಂಬೇಡ್ಕರ್. ಅವರು ವಿಮರ್ಶಾತ್ಮಕ ಚಿಂತನೆ, ಆತ್ಮವಿಶ್ವಾಸ ಮತ್ತು ಪಾರಂಪರಿಕ ಆಚರಣೆಗಳಿಗೆ ಸವಾಲು ಹಾಕುವ ಸಾಮರ್ಥ್ಯ ಶಿಕ್ಷಣಕ್ಕೆ ಮಾತ್ರ ಇದೆ ಎಂಬುದನ್ನು ಅವರು ನಂಬಿದ್ದರು.

ಅಂಬೇಡ್ಕರ್ ಅವರು ಮಹಿಳಾ ಸಮಾನತೆ ಹಾಗೂ ಲಿಂಗ ಸಮಾನತೆಯ ಕಟ್ಟಾ ಪ್ರತಿಪಾದಕರಾಗಿದ್ದರು. ಭಾರತೀಯ ಸಮಾಜದಲ್ಲೇ ಲಿಂಗ ಆಧಾರಿತ ತಾರತಮ್ಯ ಆಳವಾಗಿ ಬೇರೂರಿದೆ ಎಂದು ಗುರುತಿಸಿ, ಮಹಿಳೆಯರ ಉನ್ನತಿಗೆ ಕರೆ ನೀಡಿದರು. ಅನುವಂಶಿಕತೆ

ಆಸ್ತಿ ಮಾಲೀಕತ್ವ ಮತ್ತು ವಿವಾಹದಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳಿಗಾಗಿ ಪ್ರತಿಪಾದಿಸಿದರು. ಹಿಂದೂ ಮಹಿಳೆಯರಿಗೆ ಕಾನೂನು ರಕ್ಷಣೆ ಮತ್ತು ಹಕ್ಕುಗಳನ್ನು ಒದಗಿಸಲು ಪ್ರಯತ್ನಿಸುವ "ಹಿಂದೂ ಕೋಡ್ ಮಸೂದೆ" ಯನ್ನು ಒತ್ತಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಅಂಬೇಡ್ಕರ್ ರವರು ತಮ್ಮ "ಜಾತಿ ನಿರ್ಮೂಲನೆ" ಕೃತಿಯಲ್ಲಿ ಜಾತಿ ವ್ಯವಸ್ಥೆಯ ಅಂತರ್ಗತ ಅನ್ಯಾಯಗಳನ್ನು ಮತ್ತು ಸಮಾಜದ ಮೇಲೆ ಆದ ಹಾನಿಕಾರಕ ಪರಿಣಾಮಗಳನ್ನು ಎತ್ತಿ ತೋರಿಸಿದರು. ಜಾತಿ ನಿರ್ಮೂಲನೆ, ಸಮಾನತೆ ಮತ್ತು ಭ್ರಾತೃತ್ವವನ್ನು ಆಧರಿಸಿ ಸಮಾಜವನ್ನು ಸ್ಥಾಪಿಸಲು ಅವರು ಉತ್ಸಾಹದಿಂದ ವಾದ ಮಂಡಿಸಿದರು. ಅಂಚಿನಲ್ಲಿರುವ ಸಮುದಾಯಗಳಿಗೆ ರಾಜಕೀಯ ಭಾಗವಹಿಸುವಿಕೆ ಮಹತ್ವವನ್ನು ಗುರುತಿಸಿ ಹಕ್ಕುಗಳಿಗಾಗಿ ಹೋರಾಡಿದರು. ಭಾರತೀಯ ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಭಾರತದ ಪ್ರಜಾಪ್ರಭುತ್ವ ಚೌಕಟ್ಟನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

**ಉಪಸಂಹಾರ:**

ಬಸವಣ್ಣ, ಗಾಂಧೀಜಿ ಹಾಗೂ ಅಂಬೇಡ್ಕರ್ ಅವರು ಹಾಕಿಕೊಟ್ಟ ದಾರಿಯಲ್ಲಿ ಜೀವನ ಸಾಗಿಸಿದಾಗ ಬಾಳು ಸಮೃದ್ಧವಾಗುತ್ತದೆ. ವಚನದಲ್ಲಿನ ತತ್ವ, ಗಾಂಧೀಜಿಯವರ ಸಾಮಾಜಿಕ ಹೋರಾಟ, ಅಂಬೇಡ್ಕರ್ ರವರ ಸಮಾನತೆಯ ಹೋರಾಟಗಳು ಮಾನವನಿಗೆ ನೈತಿಕ ಚೌಕಟ್ಟನ್ನು ಹಾಕಿಕೊಟ್ಟವು. ಮನುಷ್ಯ ಮನುಷ್ಯನಾಗಿ ಸಮಾಜದ ಒಳಿತಿಗಾಗಿ ಬದುಕುವ ಮಾರ್ಗ ಅದುವೇ ಮುಂದೆ ಸರ್ವೋದಯವಾಗಿ ಎಲ್ಲರ ಸಮೃದ್ಧಿಗೆ ಕಾರಣವಾಗಬಲ್ಲದು.

**ಪರಾಮರ್ಶನ ಗ್ರಂಥಗಳು:**


1. ಡಾ. ಬಸವರಾಜು ಎಲ್., (2000), ಬಸವಣ್ಣ ವಚನಗಳು, ಗೀತಾ ಬುಕ್ ಹೌಸ್, ಮೈಸೂರು.
2. ಎಂ. ಚಿದಾನಂದಮೂರ್ತಿ, (2015), ಬಸವಣ್ಣನವರು, ನ್ಯಾಷನಲ್ ಬುಕ್ ಟ್ರಸ್ಟ್, ದೆಹಲಿ.
3. ನುಗಡೋಣಿ ಅಮರೇಶ., (ಸಂ.), (2018), ಬಸವಣ್ಣ ವಚನಗಳು – ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಡಾ. ತಿಪ್ಪೇರುದ್ರ ಸ್ವಾಮಿ ಎಚ್., (2016), ಬಸವೇಶ್ವರ ವಚನದೀಪಿಕೆ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.
5. ನಾಗಭೂಷಣ ಡಿ. ಎಸ್., (2019), ಗಾಂಧಿ ಕಥನ, ಎಂ. ಮೂನಿಸ್ವಾಮಿ ಅಂಡ್ ಸನ್ಸ್, ಬೆಂಗಳೂರು.
6. ಹುಳಿಯಾರ್ ನಟರಾಜ., (ಸಂ.), (2022), ಎಲ್ಲರ ಗಾಂಧೀಜಿ, ಪಲ್ಲವ ಪ್ರಕಾಶನ, ಚನ್ನಪಟ್ಟಣ.
7. ಡಾ. ಅಂಬೇಡ್ಕರ್, ಬಿ. ಆರ್., (1951), ಬುದ್ಧಿಸಂ ಅಂಡ್ ಇಂಡಿಯಾಸ್ ಇಲ್ಸ್ (ಬುದ್ಧ ಜಯಂತಿಯಂದು ಮಾಡಿದ ಭಾಷಣ), ಭಾರತ ಸರ್ಕಾರ, ನವದೆಹಲಿ.
8. ಜವರಯ್ಯ ಮ. ನ., (1995), ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.
9. ಡಾ. ಅಂಬೇಡ್ಕರ್, ಬಿ. ಆರ್., (2015), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
10. ಇನಾಂದಾರ್ ವಿ. ಎಂ., (2020), ಡಾ. ಬಿ. ಆರ್. ಅಂಬೇಡ್ಕರ್: ವ್ಯಕ್ತಿ ಮತ್ತು ವಿಚಾರ, ವಸಂತ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.